

ಗಂಡ ಹೆಂಡತಿ ಜಗಳವಾಡುವುದಕ್ಕೂ ಒಂದು ರೀತಿ ಅಂತ ಇರುತ್ತದೆಯೆ?

ಡಾ.ವಿನೋದ ಛೆಬ್ಬಿ

# ಏಳು: ವಿರಸದ ವರಸೆಗಳು

ದಂಪತಿಗಳು ಜಗಳ ಹೇಗೆ ಆಡುತ್ತಾರೆ? ಇದೇನು ವಿಚಿತ್ರ ಪ್ರಶ್ನೆ? ಜಗಳ ಆಡೋದು ಎಂದರೆ ಜಗಳ ಆಡೋದು! ಆಟದಲ್ಲಿ ಇರುವ ಹಾಗೆ ಜಗಳಕ್ಕೊಂದು ನೀತಿ ನಿಯಮ ಇರುತ್ತದೆಯೆ? ಇಬ್ಬರ ಪೈಕಿ ಒಬ್ಬರು ಶುರುಮಾಡುತ್ತ ಇನ್ನೊಬ್ಬರನ್ನು ಆಕ್ಷೇಪಿಸುತ್ತಾರೆ. ಎರಡನೆಯವರು ತಮ್ಮ ಬುದ್ಧಿಯನ್ನು ಸ್ಥಿಮಿತದಲ್ಲಿ ಇಟ್ಟುಕೊಂಡು ತಾಳ್ಮೆಯಿಂದ ಉತ್ತರಿಸುತ್ತ ತಮ್ಮನ್ನು ಕಾಪಾಡಿಕೊಳ್ಳುತ್ತಾರೆ. ಆಕ್ಷೇಪಣೆ ಟೀಕೆ ಆಗಿ, ಟೀಕೆ ಬಯ್ಗುಳ ಅನ್ನಿಸಿದಾಗ ತಾಳ್ಮೆ ತಪ್ಪುವಂತೆ ಆಗುತ್ತದೆ. ಆಗ, ಬೇಡ, ನನಗೆ ಸಿಟ್ಟು ಕೋಪ ತರಿಸುತ್ತಿದ್ದೀಯಾ! ಎಂದು ಎಚ್ಚರಿಕೆ ಕೊಡುತ್ತಾರೆ. ಅದನ್ನೂ ಲೆಕ್ಕಿಸದೇ ಹೋದರೆ ತಾಳ್ಮೆ ತಪ್ಪೇಬಿಡುತ್ತದೆ. ತಾಳ್ಮೆ ತಪ್ಪಿತೋ ಮುಖ ಮೂತಿ ನೋಡದೆ ಒಬ್ಬರನ್ನೊಬ್ಬರು ಬಯ್ಯುವುದು ಶುರುವಾಗುತ್ತದೆ. ಆಗ ತಲೆಗೆ ಏನು ಹೊಳೆಯುತ್ತದೆ ಅದೆಲ್ಲ ಬಾಯಿಗೆ ಬರುತ್ತದೆ. ಕೆಲವೊಮ್ಮೆ ಕೈಗೂ ಬರುತ್ತದೆ. ಅದನ್ನೇ ಜಗಳ ಅನ್ನೋದು!

ಅದೇನೋ ಸರಿ, ಆದರೆ ಬಹುಶಃ ಎಲ್ಲ ದಂಪತಿಗಳ ಜಗಳಗಳೂ ಬಹುತೇಕ ಇದೇ ಸುವ್ಯವಸ್ಥಿತ ಕ್ರಮದಲ್ಲಿ ನಡೆಯುತ್ತವೆ ಎನ್ನುವುದನ್ನು ಗಮನಿಸಿದ್ದೀರಾ?

ವಿಚಿತ್ರ ಆದರೂ ಸತ್ಯ: ಪ್ರಪಂಚದಲ್ಲಿ ಎಲ್ಲ ದಂಪತಿಗಳೂ ವಿರಸದಲ್ಲಿ ಭಾಗವಹಿಸುವಾಗ ತಮಗೆ ಅರಿವಿಲ್ಲದಂತೆ ಕೆಲವು ನಿರ್ದಿಷ್ಟ ಕ್ರಮಗಳನ್ನೂ ಉಪಾಯಗಳನ್ನೂ ಅನುಸರಿಸುತ್ತಾರೆ! ಹೊಸದಾಗಿ ಮದುವೆಯಾದವರಿಗೆ ಒಂದು ಕ್ರಮವಿದ್ದರೆ ಹಳಬರಿಗೆ ಇನ್ನೊಂದು ಕ್ರಮ ಇರಬಹುದು. ಅಲ್ಲದೆ ಒಂದೊಂದು ದಂಪತಿಯೂ ತಮ್ಮದೇ ಆದ ಕ್ರಮವನ್ನು ಅಳವಡಿಸಿಕೊಂಡಿರುತ್ತಾರೆ. ಅಷ್ಟೇ ಅಲ್ಲ, ತಮ್ಮ ಕ್ರಮವನ್ನು ಕಾಲನ ಕಾರಖಾನೆಯಲ್ಲಿ ಸಾಣೆ ಹಿಡಿದು ಹರಿತ ಮಾಡಿಕೊಳ್ಳುತ್ತಾರೆ. ಸಂಗಾತಿಯೊಡನೆ ಹೆಚ್ಚು ಕಾಲ ಕಳೆದಷ್ಟೂ ಹೆಚ್ಚು ಶಸ್ತ್ರಪಾರಂಗತರಾಗುತ್ತಾರೆ. ಆದುದರಿಂದ ವಿರಸದ ವರಸೆಗಳ ಬಗೆಗೆ ಸ್ವಲ್ಪ ನೋಡೋಣ.

ಇಲ್ಲೊಂದು ಪ್ರಶ್ನೆ: ಇಬ್ಬರಲ್ಲಿ ಯಾರು ಜಗಳ ಮೊದಲು ಶುರು ಮಾಡುತ್ತಾರೆ?

ಈ ಪ್ರಶ್ನೆಗೆ ಏನು ಯೋಚಿಸುತ್ತಿದ್ದೀರಿ ಎಂದು ನನಗೆ ಗೊತ್ತು. ನೀವು ಗಂಡಸಾದರೆ ಹೆಣ್ಣೇ ಜಗಳ ಶುರುಮಾಡುತ್ತಾಳೆ ಎನ್ನುತ್ತೀರಿ, ಹಾಗೂ ನೀವು ಹೆಣ್ಣಾದರೆ ಗಂಡಿನಿಂದಲೇ ಆರಂಭ ಎನ್ನುತ್ತೀರಿ! ಹಾಗಾದರೆ ಜಗಳಕ್ಕೆ ಕಾರಣ ಯಾರು ಎಂದು ನೋಡೇಬಿಡೋಣ.

ದಂಪತಿ ಅಭಯ್–ಅಪೇಕ್ಷಾ (ನಿಜವಾದ ಹೆಸರಲ್ಲ) ನನ್ನ ಹತ್ತಿರ ಹೇಳಿಕೊಂಡರು: ಅವೊತ್ತು ಅಭಯ್ ತಡಮಾಡಿ ಮನೆಗೆ ಹೋದಾಗ ಅಪೇಕ್ಷಾ ಆಕ್ಷೇಪಿಸಿದ್ದರಿಂದ ಶುರುವಾದ ಬಿರುಕು ಈಗ ದೊಡ್ಡದಾಗಿದೆಯಂತೆ. ಅವನ ಪ್ರಕಾರ ಸಂಭಾಷಣೆ ನಡೆದಿದ್ದು ಹೀಗೆ:

**ಅಪೇಕ್ಷಾ:** ಯಾಕ್ರೀ ಇಷ್ಟೊತ್ತು? ಮನೆ ಇದೆ, ಹೆಣ್ತಿ ಇದ್ದಾಳೆ ಎನ್ನುವುದು ಮರೆತುಹೋಯಿತೆ?

**ಅಭಯ್:** ಬೇಗ ಬರಬೇಕೆಂದಿದ್ದೆ ಕಣೆ. ನನ್ನ ಹಳೆಯ ಸ್ನೇಹಿತ ಕಿರಣ್ ಸಿಕ್ಕಿದ್ದ. ಕಾಫಿ ಕುಡಿದುಕೊಂಡು ಮಾತಾಡ್ತಾ ಇದ್ವಿ. ಟೈಮ್ ಹೋಗಿದ್ದೇ ಗೊತ್ತಾಗಲಿಲ್ಲ.

ಓಹೋ ಹಾಗೋ? ಹಳೆಯ ಸ್ನೇಹಿತ ಸಿಕ್ಕಾಗ ಹೊಸ ಹೆಂಡತಿ ಹೇಗೆ ನೆನಪಿಗೆ ಬರುತ್ತಾಳೆ ಹೇಳಿ?

ಹಾಗಲ್ಲ ಕಣೆ...

ಹಾಗಲ್ಲದೆ ಇನ್ನೇನು? ನಾನು ಆರು ಗಂಟೆಯಿಂದ ನಿಮಗೋಸ್ಕರ ಕಾಯ್ತಾ ಇದ್ದೀನಿ. ನೀವು ಒಂಬತ್ತು ಗಂಟೆಗೆ ಬಂದಿದ್ದೀರಿ. ಅದೂ ನಾನು ನಿಮಗೆ ಕಾಲ್ ಮಾಡಿದೆ ಅಂತ! ಇಲ್ಲದಿದ್ದರೆ ಇನ್ನೆಷ್ಟೊತ್ತು ಕಳೀತಿದ್ದಿರೋ ಏನೋ?

ಏನೇನೋ ಮಾತಾಡ್ತಾ ಇದ್ದೀಯಾ. ಫ್ರೆಂಡ್ ಜೊತೆ ಒಂದು ದಿನ ಕಳೆದರೆ ಏನಾಯಿತು?

ಆಹಾಹಾ! ಮನೆಯಲ್ಲಿ ನನ್ನನ್ನ ಕಾಯಲಿಕ್ಕೆ ಕೂಡಿಸೋದು, ಹೊರಗೆ ಇನ್ನೊಬ್ಬರ ಜೊತೆಗೆ ಗಂಟೆಗಟ್ಟಲೆ ಕಾಲ ಕಳೆಯೋದು! ಮುಂಚೆ ನಾವು ಲವ್ ಮಾಡುವಾಗ ಪಾರ್ಕ್‌ನಲ್ಲಿ ನನಗಿಂತ ಒಂದು ಗಂಟೆ ಮುಂಚೆ ಬಂದು ಕಾಯ್ತಾ ಇದ್ರಿ, ನೆನಪಿದೆಯಾ?

ಯಾಕೆ, ಆವಾಗ ನೀನು ನನ್ನನ್ನು ಕಾಯಿಸ್ತಾ ಇರಲಿಲ್ವಾ?...

ಅದಕ್ಕೆ ನನ್ನ ಮೇಲೆ ಹೀಗೆ ಸೇಡು ತೀರಿಸಿಕೊಳ್ತಾ ಇದ್ದೀರಿ! ಇವನಿಗೆ ಶಾಕ್!

ಇನ್ನು ಅವನ ಅಪೇಕ್ಷಾಳ ಪ್ರಕಾರ ಸಂಭಾಷಣೆ ನಡೆದಿದ್ದು ಹೀಗೆ:

**ಅಪೇಕ್ಷಾ:** ಅಲ್ರೀ ಬೆಳಿಗ್ಗೆಯಿಂದ ಒಬ್ಬಳೇ ನಿಮಗೋಸ್ಕರ ಕಾಯುತ್ತಿದ್ದೀನಿ. ಎಷ್ಟು ಬೇಜಾರು ಗೊತ್ತಾ? ಇಷ್ಟು ತಡ ಮಾಡಿದರೆ ಹೇಗೆ?

**ಅಭಯ್:** ನನ್ನ ಹಳೆಯ ಸ್ನೇಹಿತ ಕಿರಣ್ ಸಿಕ್ಕಿದ್ದ. ತಡವಾಯಿತು, ಏನೀಗ? ಈಗ ಬಂದಿದ್ದೀನಲ್ಲ, ಮಾತಾಡು. ಎಷ್ಟು ಹೊತ್ತು ಬೇಕಾದರೂ ಮಾತಾಡು.

ಯಾಕ್ರೀ ಇಷ್ಟು ಒರಟಾಗಿ ಮಾತಾಡುತ್ತಿದ್ದೀರಿ? ಹಳೆಯ ಸ್ನೇಹಿತನ ಜೊತೆ ಹೆಚ್ಚುಕಮ್ಮಿ ಮಾತು, ಜಗಳ ನಡೆಯಿತಾ? ಅದಕ್ಕೇ ನಾನು ನೆನಪಿಗೆ ಬರಲಿಲ್ಲವೇನೋ?

ಹಾಗೆಲ್ಲ ತಲೆಕೆಟ್ಟವರ ತರಹ ಆಡಬೇಡ...

(ರೇಗಿ) ಯಾಕ್ರೀ ಹೀಗೆಲ್ಲ ಮಾತಾಡ್ತಿದ್ದೀರಿ? ನಾನು ಆರು ಗಂಟೆಯಿಂದ ನಿಮಗೋಸ್ಕರ ಕಾಯ್ತಾ ಇದ್ದೀನಿ. ನೀವು ಒಂಬತ್ತು ಗಂಟೆಗೆ ಬಂದಿದ್ದೀರಿ – ಅದೂ ನಾನು ನಿಮ್ಮನ್ನ ಕಾಲ್ ಮಾಡಿದೆ ಅಂತ! ಯಾವೊತ್ತೂ ನೀವು ತಡ ಮಾಡಿಲ್ಲ. ನಿಮಗೇನಾದರೂ ಹೆಚ್ಚುಕಡಿಮೆ ಆದರೆ ಅಂತ ಯೋಚನೆಯಾಯಿತು. ನೀವು ನೋಡಿದರೆ ಸ್ನೇಹಿತನ ಜೊತೆಗಿದ್ದು ಆರಾಮವಾಗಿದ್ದೀರಿ. ಕೋಪ ಬರದೇ ಇರುತ್ತೇನ್ರೀ?

ಏನೇನೋ ಮಾತಾಡ್ತಾ ಇದ್ದೀಯಾ. ಫ್ರೆಂಡ್ ಜೊತೆ ಒಂದಿನ ಕಳೆದ್ರೆ ಏನಾಯಿತು?

ಮನೆಯಲ್ಲಿ ನನ್ನನ್ನ ಕಾಯಲಿಕ್ಕೆ ಕೂಡಿಸೋದು, ಹೊರಗೆ ಇನ್ನೊಬ್ಬರ ಜೊತೆಗೆ ಗಂಟೆಗಟ್ಟಲೆ ಕಾಲ ಕಳೆಯೋದು ಎಷ್ಟು ಸರಿ! ಮದುವೆಗಿಂತ ಮುಂಚೆ ನನ್ನನ್ನ ಲವ್ ಮಾಡುವಾಗ ಪಾರ್ಕ್‌ನಲ್ಲಿ ನನಗಿಂತ ಒಂದು ಗಂಟೆ ಮುಂಚೆ ಬಂದು ಕಾಯ್ತಾ ಇರುತ್ತಿದ್ರಿ, ನೆನಪಿದೆಯಾ?

ಯಾಕೆ, ಆವಾಗ ನೀನು ನನ್ನನ್ನು ಕಾಯಿಸ್ತಾ ಇರಲಿಲ್ವಾ? ಅದಕ್ಕೆ ಕಾಯೋದು ಎಷ್ಟು ಕಷ್ಟ ಅಂತ ಗೊತ್ತಾಯಿತಾ?

ಅದಕ್ಕೆ ನನ್ನ ಮೇಲೆ ಸೇಡು ತೀರಿಸ್ತಾ ಇದ್ದೀರಿ. ಅಲ್ವೇ? ಅಳು ಶುರು.

### ಸಂಭಾಷಣೆ ಒಂದು, ಅರ್ಥ ಇನ್ನೊಂದು

ಒಂದೇ ಸಂಭಾಷಣೆಯಲ್ಲಿ ಇಬ್ಬರು ತೊಡಗಿ, ಅದೇ ಮಾತುಗಳನ್ನು ಇಬ್ಬರೂ ಕೇಳಿಸಿಕೊಂಡರೂ ವಿಚಿತ್ರವೆಂದರೆ ಪ್ರತಿಯೊಬ್ಬರೂ ತನ್ನದೇ ಆದ ರೀತಿಯಲ್ಲಿ ಅರ್ಥೈಸಿಕೊಳ್ಳುತ್ತಾರೆ! ಅಷ್ಟೇ ಅಲ್ಲ, ಎಷ್ಟು ಜನರು ತೊಡಗಿಕೊಳ್ಳುತ್ತಾರೋ ಅಷ್ಟು –ಕೆಲವರಿಗೆ ದ್ವಂದ್ವ ಇದ್ದರೆ ಇನ್ನೂ ಹೆಚ್ಚು– ಅಭಿಪ್ರಾಯಗಳು ಬರುತ್ತವೆ. ತಲೆಗೊಂದು ಅಭಿಪ್ರಾಯ ಅಂತಾರಲ್ಲ, ಹಾಗೆ. ಹಾಗಾಗಿಯೇ ಗಂಡಹೆಂಡತಿಯ ಜಗಳದಲ್ಲಿ ಸಂಬಂಧಿಕರು ತಲೆ ಹಾಕಿದರೆ ಅದು ಬಗೆಹರಿಯುವುದಿಲ್ಲ, ಇನ್ನಷ್ಟು ಕೆಡುತ್ತದೆ! ಅದಕ್ಕೇ ನನ್ನ ಹತ್ತಿರ ಬರುವ ದಂಪತಿಯ ಜೊತೆಯ ಸಂಬಂಧಿಕರನ್ನು ಕೋಣೆಯ ಹೊರಗೇ ಕೂಡಿಸುತ್ತೇನೆ. ಅವರನ್ನೂ ಒಳಗೆ ಕರೆದರೆ ದಾಂಪತ್ಯ ಚಿಕಿತ್ಸೆಯಾಗುವುದಿಲ್ಲ, ವಿಚ್ಛೇದನಕ್ಕೆ ಪಂಚಾಯಿತಿ ಆಗುತ್ತದಷ್ಟೆ.

ಅಂದಹಾಗೆ, ಸಂಗಾತಿಗಳಲ್ಲಿ ಒಬ್ಬರು ಒಂದು ಮಾತಾಡಿದರೆ ಅದನ್ನು ಇನ್ನೊಬ್ಬರು ಅದೇ ರೀತಿ ಅರ್ಥಮಾಡಿಕೊಳ್ಳದೆ ಅಪಾರ್ಥ ಯಾಕೆ ಮಾಡಿಕೊಳ್ಳುತ್ತಾರೆ? ಮಾತು ಒಂದು, ಅರ್ಥ ಇನ್ನೊಂದು ಎನ್ನುವಂತೆ ಹೀಗೆ ಬೇರೆ ಬೇರೆ ಅಭಿಪ್ರಾಯಗಳನ್ನು ತಾಳಲು ಏನು ಕಾರಣ?

ಇದನ್ನು ಮುಂದಿನ ಸಲ ಪರಿಶೀಲಿಸೋಣ.

**[ದಾಂಪತ್ಯದ ಬಗೆಗೆ ನಿಮ್ಮ ಅನಿಸಿಕೆ, ಸಮಸ್ಯೆಗಳನ್ನು ಸುಖೀ ದಾಂಪತ್ಯ ವಿಭಾಗ, ನಂ. 75, ಎಂ. ಜಿ. ರಸ್ತೆ, ಬೆಂಗಳೂರು 01 ಇಲ್ಲಿಗೆ ಕಳುಹಿಸಿ. ದಾಂಪತ್ಯ ಸಮಸ್ಯೆಗಳಿಗೆ ಉಚಿತ ಸಹಾಯವಾಣಿ 8494944888 ಗೆ ಪ್ರತಿ ಶುಕ್ರವಾರ ಮಧ್ಯಾಹ್ನ 2ರಿಂದ 4ರ ತನಕ ಕರೆಮಾಡಿ. ಲೇಖಕರ ವಿಳಾಸ: .www.medisex.org]**